ಮುಖಂಡರು ಈ ಕಂಪನಿಯ ಮಾಲೀಕ ಗಣಂಡಗಳನ್ನು ಕರೆಯಿಸಿ ಇವರನ್ನು ಕಂಪನಿಯ ಒಳಗೆ ಹೊಡೆಸಿದ್ದಾನೆ ಅಲ್ಲಿ ಹೆಣ್ಣುವಂಕ್ಕಳೂ ಕೆಲಸ ಮಾಡಲೂ ಇದ್ದಾರೆ. ಅವರನ್ನು ಹೊಡೆದು ಸೈನ್ ಹಾಕಿಸಿಕೊಳ್ಳುತ್ತಾನೆ ಮತ್ತು ಈ ಕಂಪನಿಯಲ್ಲಿಗೂ ಗ್ಲಾಸ್‌ನಲ್ಲಿ ಕೆಲಸ ಮಾಡುವ ರಿಯಾಜ್ ಅಹಮದ್ ಮತ್ತು ಪ್ರಸಾದ್ ಅನ್ನುವವರನ್ನೂ ಕೂಡ ಈ ಮಾಲೀಕ ಹೊಡೆಸಿದ್ದಾನೆ ಈ ರೀತಿ ಮಾಡಿದ ಮೇಲೆ ಪೋಲೀಸಿನವರು ಬಂದು ಸಮಾಧಾನ ಮಾಡಬೇಡವೇ ಅವರು ಏನು ಮಾಡಿದರು ಎಂದರೆ ಆ ಟ್ರೇಡ್ ಯೂನಿಯನ್ ಮುಖಂಡನನ್ನು ಸುತ್ತು ೧೫-೨೦ ಜನರನ್ನೂ ಪೋಲೀಸ್ ವ್ಯಾನಿನಲ್ಲಿ ಕೂರಿಸಿಕೊಂಡು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ.

ಅಧ್ಯಕ್ಷರು —ಸರ್ಕಾರದ ಪರವಾಗಿ ಏನಾದರೂ ಹೇಳಬೇಕಾದರೆ ಹೇಳಿ.

SRI M KRISHNA —We need some time. Why not we take it up tommorrow.

ಶ್ರೀ ಎಂ ಎಸ್. ಕೃಷ್ಣನ್. —ಅವರು ನಾಳೆಯೇ ಉತ್ತರ ಕೊಡಲಿ. ಇದು ಬಹಳ ಮುಖ್ಯವಾದ ವಿಷಯ. ಆದುದರಿಂದ ನಾನು ಈಪೊತ್ತು ಹೇಳುತ್ತಿದ್ದೇನೆ ಈಗ ಏನಾಗಿದೆ ಎಂದರೆ ಒಬ್ಬ ಟ್ರೇಡ್ ಯೂನಿಯನ್ ಮುಖಂಡ ಅಲ್ಲಿ ಶಾಂತಿಪಾಲನೆ ಮಾಡಬೇಕೆಂದು ಹೋದವನನ್ನು ಪೋಲೀಸಿನವರು ವ್ಯಾನಿನಲ್ಲಿ ಕರೆದುಕೊಂಡು ಹೋದರು ಅಸಿಸ್ಟೆಂಟ್ ಕಮೀಷನರ್ ಮಲ್ಲಣಗೌಡ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಸುಬ್ರಹ್ಮಣ್ಯಂ ಅವರಿಗೆ ಹೊಡೆದಿದ್ದಾರೆ ಈ ಇಬ್ಬರು ಕೆಲಸಗಾರರನ್ನೂ ಮತ್ತು ಜೊತೆಗೆ ೧೫-೨೦ ಜನರನ್ನು ಸೇರಿಸಿಕೊಂಡು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಅವರನ್ನು ಪ್ರೈಜರ್ ಟೌನ್‌ಗೆ ಕರೆದುಕೊಂಡು ಹೋಗಿ ಬಟ್ಟೆ ಬಿಚ್ಚಿಸಿ ಚೆನ್ನಾಗಿ ಹೊಡೆದು ಕೊನೆಗೆ ಅವರನ್ನು ಲಾಕ್ ಅಪ್‌ನಲ್ಲಿ ಹಾಕಿದ್ದಾರೆ ಅವರನ್ನು ನೋಡಬೇಕಾದರೆ ಇಲ್ಲೇ ಇದ್ದಾರೆ, ಕರೆಸ ತ್ತೇನೆ ಅವರ ಮೈ ಕೈ ನೋಡಿ. ಚೆನ್ನಾಗಿ ಜಜ್ಜಿದ್ದಾರೆ. ಅವರು ಕೈಗೆ ಬ್ಯಾಂಡೇಜ್ ಕಟ್ಟಿದ್ದಾರೆ ಆದ್ದರಿಂದ ನಾನು ಹೇಳುವುದು those people responsible must be first dismissed, whoever they may be.

(ಅನೇಕ ಜನ ಸದಸ್ಯರು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು.—ನಾನು ಇನ್ನೊಂದು ರೂಲಿಂಗ್ ಕೊಡಬೇಕಾಗುತ್ತದೆ ನಾನು ನಿಂತುಕೊಂಡಾಗ ಯಾರಾದರೂ ಮಾತನಾಡಿದರೆ ಅದನ್ನು ವರದಿಗಾರರು ಬರೆದುಕೊಳ್ಳಕೂಡದು ಎಂದು ಹೇಳಬೇಕಾಗುತ್ತದೆ

ಶ್ರೀ ಎಂ ಎಸ್. ಕೃಷ್ಣನ್ —ಇಲ್ಲಿ ಆದಂತಹ ಅಮಾನುಷ ಕೃತ್ಯಗಳನ್ನು ಮುಂದೆ ಆಗದಂತೆ ನಿಲ್ಲಿಸ ಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅವರು ಅದನ್ನು ನಿಲ್ಲಿಸುತ್ತಾರೆ. ಈಗ ಇದನ್ನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಆಗಿ ಪರಿವರ್ತನೆ ಮಾಡುತ್ತೇನೆ, ನಾಳೆ ದಿವಸ ಮಾನ್ಯಮಂತ್ರಿಗಳು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡ ಬಹುದು.

MATTER UNDER RULE 312

(i) re : Linsisting on Production of Levy Certificates for Renewing gan licences at Sagar

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ರೂಲ್ ೩೧೨ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಅದು ಬಹಳ ಮುಖ್ಯವಾದ ವಿಷಯ ಅದು ಯಾವ ವಿಷಯ ಎಂದರೆ ಸಾಗರ ಸಬ್ ಡಿವಿಜನ್‌ನಲ್ಲಿ ಸುಮಾರು ೨ ಸಾವಿರ ಜನ ವ್ಯವಸಾಯಗಾರರು ಗನ್ ಲೆಸನ್ಸ್ ರೆನ್ಯೂಯಲ್‌ಗೆ ಅರ್ಜಿ ಯನ್ನು ಹಾಕಿಕೊಂಡಿದ್ದಾರೆ. ಕಾನೂನು ಪ್ರಕಾರ ಅದನ್ನು ರಿನ್ಯೂ ಮಾಡುವ ಅಧಿಕಾರ ಸಂಬಂಧಪಟ್ಟ ಅಧಿಕಾರಿಗೆ ಇದೆ. ಆದರೆ ಅವರು ಏನು ಮಾಡುತ್ತಿದ್ದಾರೆ ಎಂದರೆ ನೀವ್ಯಲೆವಿ ಕ್ಲಿಯರೆನ್ಸ್ ಸರ್ಟಿಫಿಕೇಟ್

ತೆಗೆದುಕೊಂಡು ಬನ್ನಿ, ಕಂದಾಯದ ಕ್ಲಿಯರೆನ್ಸ್ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ, ನೀರಿನ ತೆರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಅವರಿಗೆ ಈ ರೀತಿಯಾಗಿ ಫೈನಲ್ ನೋಟೀಸ್ ಕೊಟ್ಟಿದ್ದಾರೆ. ನೀವು ಇದನ್ನು ಒಂದು ವಾರದೊಳಗೆ ಕೊಡದೇ ಹೋದರೆ ನಿಮ್ಮ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸ್ ೧೧ ಗಂಟೆಗೆ ನಮ್ಮ ಆಫೀಸಿಗೆ ಬಂತು. ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ವ್ಯವಸಾಯಗಾರರು ಏನಾದರೂ ಇವರಿಗೆ ಶತ್ರುವಾಗಿದ್ದಾರೆಯೇ ಅವರನ್ನು ಕಂಡರೆ ಇವರಿಗೆ ಏನಾಗುತ್ತದೆ ಅನ್ನುವುದನ್ನು ಹೇಳಬೇಕು ಯಾವುದಕ್ಕೂ ಒಂದು ಮಿತಿಬೇಕು ತೀರ ಅಟ್ಟಹಾಸದ ರೀತಿಯಲ್ಲಿ ನಡೆದರೆ ನಾವು ಅದನ್ನು ಪ್ರತಿಭಟಿನೆ ಮಾಡಬೇಕಾಗುತ್ತದೆ. ಯಾವ ಅಧಿಕಾರಿಯಾದರೂ ಕಾನೂನಿನ ಚೌಕಟ್ಟಿನಲ್ಲೇ ನಡೆಯಬೇಕು. ಆ ವ್ಯವಸಾಯಗಾರರಿಗೆ ಈ ರೀತಿಯಾಗಿ ಫೈನಲ್ ನೋಟೀಸ್ ಇಷ್ಯೂ ಮಾಡಿದ್ದಾರೆ. ನೀವು ಒಂದು ವಾರದೊಳಗೆ ಈ ವ್ಯವಹಾರವನ್ನು ತೀರ್ಮಾನವಾಡದೇ ಹೋದರೆ ನಿಮ್ಮ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ನೀವು ಈ ಗನ್ ಲೈಸನ್ಸ್‌ನ ರಿನ್ಯೂಯಲ್‌ಗೂ ಮತ್ತು ಲೆವಿಗೂ ಸಂಬಂಧ ಕಲ್ಪಿಸಬೇಡಿ. ಇದರ ಬಗ್ಗೆ ಅವರಿಗೆ ಸ್ಪಷ್ಟ ತಿಳುವಳಿಕೆ ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಇದೇ ವಿಷಯದ ಬಗ್ಗೆ ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ ನಾನು ಈ ಬಗ್ಗೆ ಏನು ಕೇಳಬೇಕೆಂದಿದ್ದೇನೆ ಎಂದರೆ ನಿಮ್ಮ ಲೆವಿ ಕಾನೂನಿನಲ್ಲಿ ನೀವು ಲೆವಿ ಕೊಡದೇ ಹೋದರೆ ಈ ಬಂದೂಕದ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇವೆ ಅಂತ ಇದೆಯೋ ಅಥವಾ ಬಂದೂಕದ ಲೈಸೆನ್ಸ್‌ನ್ನೂ ರಿನ್ಯೂ ಮಾಡಿಸಬೇಕಾದರೆ ಲೆವಿ ಕೊಟ್ಟೇ ಕೊಡಬೇಕು ಅಂತ ಇದೆಯೇ ಮತ್ತು ವಾಟರ್ ಟ್ಯಾಕ್ಸ್ ಕೊಡಬೇಕು ಅಂತ ಇದೆಯೇ ? ರೈತರಿಗೆ ನಾವು ರಕ್ಷಣೆ ಕೊಡಬೇಕೇ ಹೊರತು ಈ ರೀತಿಯಾದ ತೊಂದರೆಗಳನ್ನು ಕೊಟ್ಟು ಲೆವಿ ಹಾಕುವುದು ವಾಟರ್ ಟ್ಯಾಕ್ಸ್ ಹಾಕುವುದು ಈ ರೀತಿಯಾಗಿ ನಾವು ಕೆಲಸ ಮಾಡುತ್ತೇವೆ ಎಂದರೆ ದಯಮಾಡಿ ಇದು ಕಾನೂನಿನಲ್ಲಿ ಇದೆಯೇ ಹೇಳಿ ? ಕಾನೂನಿನಲ್ಲಿ ಇದ್ದರೆ ಅದು ಯಾವ ಪ್ರೊವಿಷನ್‌ನಲ್ಲಿ ಇದೆ ಅನ್ನುವುದನ್ನು ಹೇಳಿ ? ಇಲ್ಲದೇ ಹೋದರೆ ಅವರಿಗೆ ರಕ್ಷಣೆ ಕೊಡಿ.

ಅಧ್ಯಕ್ಷರು.—ಸರ್ಕಾರದವರು ಇದರ ಬಗ್ಗೆ ಏನಾದರೂ ಹೇಳುವುದಾದರೆ ಹೇಳಬಹುದು.

2-30 P. M.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖಾ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಯಾವ ಸಂದರ್ಭದಲ್ಲಿ ಆ ರೀತಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಲೆವಿ ವಸೂಲು ಮಾಡತಕ್ಕದ್ದು ಹಾಗೂ ಕಂದಾಯದ ಬಾಕಿಯನ್ನು ವಸೂಲು ಮಾಡುವಾಗ ಸಾಮಾನ್ಯವಾಗಿ ರೈತರಿಗೆ ಭಯ ತೋರಿಸುವಂಥ ಸಾಮಾನುಗಳನ್ನು ಹರಾಜು ಮಾಡುತ್ತೇವೆಂದು ಹೇಳುತ್ತಿದ್ದರು. ಆದರೆ ಇದಕ್ಕೂ ಬಂದೂಕದ ಲೈಸನ್ಸ್‌ಗೂ ಏನೂ ಸಂಬಂಧವಿಲ್ಲ. ರೂಲ್ಸು ಪ್ರಕಾರ ಬಂದೂಕದ ಲೈಸನ್ಸ್ ಯಾವ ರೀತಿ ಕೊಡಬೇಕೋ ಆ ರೀತಿ ಅವರಿಗೆ ಕೊಡಬಹುದು. ಇದರ ಬಗ್ಗೆ ರೂಲ್ಸು ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ತಿಳಿಸುತ್ತೇನೆ.

(*ii*) *re : Activites of the Bhoosena at Peluperar*

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಸ್ವಾಮಿ, ನಾನು ರೂಲು ೫೧೫ರ ಪ್ರಕಾರ ತಮ್ಮ ಕಡೆಗೆ ಒಂದು ನೋಟೀಸು ಕಳುಹಿಸಿದ್ದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಪಡುಪೇರಾ ಗ್ರಾಮದಲ್ಲಿ ಭೂ-ಸೇನಾದವರು ರೈತರ ಮೇಲೆ ಒಂದು ರೀತಿಯಾಗಿ ದಬ್ಬಾಳಿಕೆ ಮಾಡುತ್ತಿದ್ದಾರೆ. ಇದರ ಬಗ್ಗೆ ಇನ್ ಪೆಸ್ಟಿಗೇಟ್ ಮಾಡಬೇಕೆಂದು ಕೇಳುತ್ತೇನೆ. ಇದರಿಂದ ರೈತರಿಗೆ ಜೀವನ ಮಾಡುವುದೇ ಕಷ್ಟವಾಗಿದೆ. ಭೂ-ಸೇನಾ ನಾಯಕರು ರೈತರ ಡಿಫೆನ್ಸ್ ಕೌನ್ಸಿಲ್ ಆಗಿ ಕೆಲಸ ಮಾಡುವ ಬಗ್ಗೆ ಅಲ್ಲಿರುವ ರೈತರಿಗೆ ಈ ರೀತಿ ಮಾಡುತ್ತಿದ್ದಾರೆ ಎನ್ನುವುದು ಪಡುಪೇರಾ ಗ್ರಾಮದಲ್ಲಿರುವ ರೈತರಿಗೆ ಈ ರೀತಿ ಮಾಡುತ್ತಿದ್ದಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ ಇದರ ಬಗ್ಗೆ ಸರ್ಕಾರ ತೀವ್ರವಾದ ಕ್ರಮ ತೆಗೆದುಕೊಂಡು ಇಲ್ಲಿರುವ ತಪ್ಪುಗಳೇನು ಎನ್ನುವುದನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ.